ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ ಮರಗಳನ್ನು ಕಡಿದು ರಾಶಿ ಹಾಕಿದಾಗ ಆದರ ಒಂದು ಎತ್ತರ ಮತ್ತು ಅಡಿ ಇವುಗಳನ್ನು ನೋಡಿಕೊಂಡು ಇಷ್ಟು ವೈಟ್ ಇದೆ ಎಂದು ಅಂದರೆ ಇಷ್ಟು ಟನ್ ಇದೆ ಎಂದು ನಿಗದಿ ಮಾಡಿಬಿಡುತ್ತಾರೆ. ಇದರಿಂದ ಸಾವಿರಾರು ಟನ್‌ನಷ್ಟು ಹೆಚ್ಚು ಕಡಿಮೆ ಬರುತ್ತದೆ. ಎಂದು ನಾನು ಕೇಳಿದ್ದೇನೆ. ಆದುದರಿಂದ ಇದರ ಬಗ್ಗೆ ಕರಾರುವಕ್ಕಾಗಿ ತೂಕ ಮಾಡಿ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಜೆ. ರಾಮೇಗೌಡ.—ನಮ್ಮ ಸ್ನೇಹಿತರು ಈ ವಿಚಾರವನ್ನು ಅತುರಾತುರವಾಗಿ ತಿಳಿದುಕೊಂಡಿದ್ದಾರೆ. ೮೦ ಸಿ.ಎಫ್.ಟಿ.ಗೆ ಒಂದು ಟನ್ ಅಂತ ಹಲವಾರು ಗಾಡಿಗಳನ್ನು ಕೊಟ್ಟಿದ್ದೇವೆ. ಒಂದು ವೇಳೆ ಕಡಿಮೆಯಾಗಿದ್ದರೂ ಕೂಡ ಆದನ್ನು ಫ್ಯಾಕ್ಟರಿಯಲ್ಲಿ ತೂಕ ಮಾಡಿ ಆದರ ವ್ಯತ್ಯಾಸವನ್ನು ಕಂಡು ಹಿಡಿದಿದ್ದೇವೆ. ಕೆಲವು ಟೈಂನಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಬರಬಹುದು. ಆದರೆ ೮೦ ಅಡಿಗೆ ಒಂದು ಟನ್‌ನಂತೆ ಕೊಟ್ಟಿದ್ದೇವೆ. ಎಲ್ಲಿ ಇಂತಹ ಒಂದು ವೈತ್ಯಾಸ ಬರುತ್ತದೋ ಆದನ್ನು ತಡೆಹಿಡಿದು ಆದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದುದರಿಂದ ಈ ವಿಚಾರದಲ್ಲಿ ಮಾನ್ಯ ಸ್ನೇಹಿತರು ಅನುಮಾನ ಏನೂ ಪಡಬೇಕಾದ್ದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಈ ಪ್ರಶ್ನೆಯ (ಆ)ಗೆ ಉತ್ತರವಾಗಿ ೩ ನೇ ಐಟಂನಲ್ಲಿ ಈ ರೀತಿ ಕೊಟ್ಟಿದ್ದೀರಾ. ಏನೆಂದರೆ ೧-೧-೧೯೭೬ರ ನಂತರ ಪ್ರತಿ ಟನ್ನಿಗೆ ೩೬ ರೂ.ಗಳು ಹೀಗಿದ್ದರೂ ದಿನಾಂಕ ೨೧-೪-೧೯೭೮ ರಂದು ಹೊರಡಿಸಿದ ಸರ್ಕಾರೀ ಆದೇಶದ ಪ್ರಕಾರ ಸರ್ಕಾರವು ಪ್ರತಿ ವರ್ಷ ೧.೫ ಲಕ್ಷ ಟನ್ನು ಗಳಿಗಿಂತ ಹೆಚ್ಚಿಗೆಯಾಗಿ ತೆಗೆದುಕೊಂಡ ಮರದ ಪ್ರಮಾಣಕ್ಕೆ ಪ್ರತಿ ಟನ್ನಿಗೆ ಈ ದರವನ್ನು ೬೫ ರೂ.ಗಳಿಗೆ ಏರಿಸಿದೆ ಅಂತ ಹೇಳಿದ್ದೀರಿ. ೧.೫ ಲಕ್ಷ ಟನ್ ಮೇಲ್ಪಟ್ಟು ಅಂತ ಹೇಳಿದ್ದೀರಲ್ಲಾ ಈ ಒಂದು ಕನ್‌ಸೆಷನ್ ಆವರಿಗೆ ಏತಕ್ಕೆ ಕೊಟ್ಟಿದ್ದೀರಿ ? ಇದನ್ನು ರಿವೈಸ್ಡ್ ಮಾಡಿ ಈ ರೀತಿ ಮಾಡಿದ್ದೀರಲ್ಲಾ ಏತಕ್ಕೆ ? ಮತ್ತು ಆವರ ಬೇಡಿಕೆ ಎಷ್ಟು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಜೆ ರಾಮೇಗೌಡ.—ಆಗಿನ ಒಂದು ಕೆಪಾಸಿಟಿಯಂತೆ ಒಂದು ವರ್ಷಕ್ಕೆ ಏಷ್ಟಾದರೂ ಕೊಡಬೇಕು ಅಂತ ಒಂದು ಅಂದಾಜು ಇದೆ, ಆಗಿನ ಇದರ ಒಂದು ಕೆಪಾಸಿಟಿಯನ್ನು ನೋಡಿಕೊಂಡು ಆ ಬಗ್ಗೆ ಕೋರಿಕೆ ಬಂದಾಗ ಈ ಒಂದು ಕಂಡೀಷನ್ ಹಾಕಿದ್ದೇವೆ. ಆಲ್ಲಿ ಎಷ್ಟು ಬೆಳೆಯುತ್ತದೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಅಷ್ಟು ಬೆಳೆಯದೇ ಇದ್ದರೆ ಕೊಡುವುದಕ್ಕಾಗುವುದಿಲ್ಲ. ಹಿಂದಿನ ಒಂದು ಕರಾರಿನಂತೆ ಅಷ್ಟು ಕೂಡಲೇ ಬೇಕಾಗಿತ್ತು. ಆದರಿಂದ ನಾವು ಈ ಒಂದು ಕಂಡೀಷನ್ ಅನ್ನು ಹಾಕಿರುವ ಉದ್ದೇಶ. ಅವರ ಡಿಮ್ಯಾಂಡ್ ಈ ವರ್ಷ ೨ ಲಕ್ಷ ಟನ್ ಆದರೂ ಆಗಬಹುದು. ಹಿಂದಿನ ವರ್ಷ ೧.೫ ಲಕ್ಷ ಟನ್‌ಗಿಂತ ಹೆಚ್ಚಿದ್ದಕ್ಕೆ ಆದನ್ನು ವಸೂಲ್ಮಾಡಿದ್ದೇವೆ.

Police Quarters at Sandur Town

842. SRI C. RUDRAPPA (Sandur).—Will the Chief Minister be pleased to state :—

(*a*) the reasons for the delay in sanctioning the administrative approval in respect of the estimated cost pertaining to the construction of Police Quarters at Sandur Town ;

(*b*) whether it has come to the notice of Government that the Police Staff has been put to lot of difficulties for want of accommodation ;

(*c*) if so, whether the Government intends sanctioning the administrative approval in this respect construction of the building at the earliest ?

SRI D. DEVARAJ URS (Chief Minister).—

(*a*) The Inspector General of Police. has sent the proposal for the construction of Police Quarters at Sandur in Bellary District to Government on 2-12-1977. In view of the economy orders issued by the Finance Department, the proposal could not be considered during the year 1977-78.

(*b*) Yes.

(*c*) This will be considered during the current year 1978-79.

ಶ್ರೀ ಸಿ. ರುದ್ರಪ್ಪ.—ಸ್ವಾಮಿ, (ಅ)ಗೆ ಉತ್ತರವಾಗಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಪೋಲೀಸ್ ವಸತಿ ಗೃಹಗಳನ್ನು ನಿರ್ಮಿಸಲು ಸಲಹೆಯನ್ನು ದಿನಾಂಕ ೨-೧೨-೧೯೭೭ ರಂದು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರದವರಿಗೆ ಕಳುಹಿಸಿದ್ದಾರೆ. ಆರ್ಥಿಕ ಇಲಾಖೆಯವರು ಮಿತವ್ಯಯ ಆದೇಶಗಳನ್ನು ಹೊರಡಿಸಿರುವುದರಿಂದಾಗಿ ೧೯೭೭-೭೮ನೇ ಸಾಲಿನಲ್ಲಿ ಸದರಿ ಸಲಹೆಯನ್ನು ಪರಿಶೀಲಿಸಲು ಸಾಧ್ಯವಾಗಲಿಲ್ಲಾ ಎಂದು ಹೇಳಿದ್ದಾರೆ. ಮತ್ತು (ಇ)ಗೆ ಉತ್ತರವಾಗಿ ಪ್ರಸಕ್ತ ಸಾಲಿನಲ್ಲಿ ಅಂದರೆ ೧೯೭೮-೭೯ ನೇ ಸಾಲಿನಲ್ಲಿ ಇದನ್ನು ಪರಿಶೀಲಿಸಲಾಗುವುದು ಅಂತ ಹೇಳಿದ್ದಾರೆ. ಆದುದರಿಂದ, ನಿರ್ದಿಷ್ಟವಾಗಿ ಈ ವರ್ಷದ ಅವಧಿಯಲ್ಲೇ ಈ ಕಾರ್ಯಗಳನ್ನು ಕೈಗೊಳ್ಳುತ್ತೀರಾ ?

† ಶ್ರೀ ಡಿ. ದೇವರಾಜ್ ಅರಸ್.—ಈ ವರ್ಷ ಮಾಡಿಸುತ್ತೇನೆ.

ಶ್ರೀ ಸಿ. ರುದ್ರಪ್ಪ.—ಇದರ ಎಸ್ಟಿಮೇಟ್ ಕಾಸ್ಟ್ ಎಷ್ಟು ಆನ್ನುವುದು ಗೊತ್ತಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಸುಮಾರು ೬ ಲಕ್ಷ ೮೦ ಸಾವಿರ ಒಲ್ಲರೆ ಆಗಬಹುದು.

ಶ್ರೀ ಸಿ. ರುದ್ರಪ್ಪ.—ಈ ವರ್ಷದಲ್ಲಿ ೫೦ ಪರ್ಸೆಂಟ್ ಅಷ್ಟು ಮೊಬಲಗನ್ನಾದರೂ ಖರ್ಚುಮಾಡಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಈ ವರ್ಷ ಮಾಡಿಸುತ್ತೇನೆಂದು ಮೊದಲೇ ಹೇಳಿದನಲ್ಲಾ,

Non-achievement of desired results in Janatha Housing Scheme

972. SRI K.B. MALLAPPA (Arakalgud) and SRI B.H. LAKSHMANAIAH (Belur).—Will the Minister of State for Housing be pleased to state:—

whether it has come to the notice of the Government that due to mismanagement in the construction of Janatha Houses lot of injustice is being done to poor people and that the purpose of the scheme is not being achieved ?

SRI D. DEVARAJ URS (Chief Minister) for SRI P. F. RODRIGUES (Minister of State for Housing).—

No.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಕೊಟ್ಟಿದ್ದರೆ ಇದನ್ನು ಪ್ರಶ್ನೆ ರೂಪವಾಗಿ ಪರಿವರ್ತಿಸಿದ್ದಾರೆ. ಈ ಪ್ರಶ್ನೆ ರಾಜ್ಯಕ್ಕೆ ಸಂಬಂಧಪಟ್ಟದ್ದು ಮತ್ತು ಬಡವರಿಗೆ ಸಂಬಂಧಪಟ್ಟದ್ದು ಆಗಿರುವುದರಿಂದ ಇದನ್ನು ಪ್ರಶ್ನೆ ರೂಪವಾಗಿ ಪರಿವರ್ತಿಸಿದ್ದಾರಲ್ಲಿ ಏಕೆ ಸ್ವಾಮಿ ?

ಅಧ್ಯಕ್ಷರು.—ತಾವು ಇದರ ಬಗ್ಗೆ ಏನಾ ಉಪಪ್ರಶ್ನೆ ಕೇಳಬೇಕೋ ಅದನ್ನು ಕೇಳಿ. ರೂಲ್ ಪ್ರಕಾರ ಇದನ್ನು ಪ್ರಶ್ನೆ ರೂಪವಾಗಿ ಪರಿವರ್ತಿಸಿದೆ. ಇದರ ಮೇಲೆ ನಿಮ್ಮ ಪ್ರಶ್ನೆಯನ್ನು ಹಾಕಿ.